		Devanahalli	14 00
		DB Pura	30 00
		Hosakote	24 00
		Nelamangala	5 00
	Total		**127 82**
26	BELLARY	Bellary	126 73
		Hadagali	96 55
		Hagaribommana halli	65 00
		Koodligi	48 89
		Hospet	119 75
		Siraguppa	28 75
	Total		**485 67**
27	BELGAUM	Athani	104 50
		Bailahongala	85 00
		Belgaum	124 50
		Gokak	41 50
		Hukeri	32 60
		Raibag	4 90
		Ramdurga	67 50
		Khanapur	30 00
		Soundatti	35 00
		Chickodi	25 00
	Total		**550 50**
	GRAND TOTAL		**5352 01**

108 (22) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಬಿ ಪಿ ಎಲ್ ಕಾರ್ಡು ಹೊಂದಿರುವವರೆಷ್ಟು ,

ಆ) ರಾಜ್ಯದ ಎಲ್ಲಾ ಕಡುಬಡವರಿಗೆ ಹಸಿರು ಕಾರ್ಡು ವಿತರಣೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ , ಹಸಿರು ಕಾರ್ಡು ವಿತರಣೆ ಮಾಡಲು ತಗಲುವ ಒಟ್ಟು ವೆಚ್ಚವೆಷ್ಟು ,

ಇ) ಗಣಕೀಕರಣದ ಪಡಿತರ ಚೀಟಿ ವಿತರಣೆ ಮಾಡುವುದರಲ್ಲಿ ಆದ ಲೋಪದೋಷಗಳನ್ನು ಸರಿಪಡಿಸಲಾಗಿದೆಯೇ , ಗಣಕೀಕರಣದ ಪಡಿತರ ಚೀಟಿ ವಿತರಣೆ ಮಾಡಲು ಯಾವ ಐಟಿ ಕಂಪನಿಗೆ ಗುತ್ತಿಗೆ ನೀಡಲಾಗಿದೆ ,

ಈ) ಒಟ್ಟು ಗುತ್ತಿಗೆ ಮೊತ್ತವೆಷ್ಟ ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಪ್ರಸ್ತುತ ಬಿ ಪಿ ಎಲ್ ಕಾರ್ಡು ಹೊಂದಿರುವವರ ವಿವರ ಕೆಳಕಂಡಂತಿದೆ

ಎಎವೈ	–	11,75,959
ಬಿಪಿಎಲ್	–	53,85,258
ಅನ್ನಪೂರ್ಣ	–	25,452
ಒಟ್ಟು	–	65,86,669

ಆ) ಇಲ್ಲ ಆದರೆ, ಬಡವರಿಗೆ ಅಕ್ಷಯ ಪಡಿತರ ಚೀಟಿಯನ್ನು ಹಾಗೂ ಕಡುಬಡವರಿಗೆ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ ಮತ್ತು ನಿರ್ಗತಿಕರಿಗೆ ಅನ್ನಪೂರ್ಣ ಪಡಿತರ ಚೀಟಿವಿತರಿಸಲಾಗುತ್ತಿದೆ

ಸದರಿ ಯೋಜನೆಯ ಸಂಪೂರ್ಣ ವೆಚ್ಚವನ್ನು ತಾತ್ಕಾಲಿಕ ಪಡಿತರ ಕೂಪನ್, ಪಡಿತರ ಚೀಟಿ ಮತ್ತು ಆಹಾರ ಕೂಪನ್‌ಗಳ ಹಾಗೂ ಇತರೇ ಸೇವೆಗಳಿಗೆ ನಿಗದಿಪಡಿಸಿರುವ ಶುಲ್ಕದಿಂದ ಭರಿಸಲಾಗುತ್ತಿದೆ ಈ ಯೋಜನೆಗೆ ಸರ್ಕಾರವು ಯಾವುದೇ ಅನುದಾನ ಒದಗಿಸಿರುವುದಿಲ್ಲ

ಇ) ಸರಿಪಡಿಸಲಾಗುತ್ತಿದೆ

ಗಣಕೀಕರಣದ ಪಡಿತರ ಚೀಟಿ ವಿತರಣೆ ಮಾಡಲು

1) ಮೆ॥ ಕಾಮನ್ ಟೆಕ್ನಾಲಜೀಸ್ ಲಿ, ಹಾಗೂ ಸಹ ಪಾಲುದಾರರಿಂದ

2) ಮೆ॥ ಮ್ಯಾಕ್ರೋ ಇನ್ಫೋಟೆಕ್,

3) ಆಡ್‌ವ್ಯೂಸ್ ಡಿಜಿಟಲ್ ಸಿಸ್ಟಂ,

4) ಸಿಎಂಎಸ್ ಕಂಪ್ಯೂಟರ್ಸ್

5) ಶ್ರೀ ಕಂಪ್ಯೂಟರ್ಸ್ ಇವರಿಗೆ "ಸಾರ್ವಜನಿಕ" – ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಲು 5 1/2 ವರ್ಷಗಳ ಅವಧಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ ;

ಈ) ಯೋಜನೆಯ ಪೂರ್ಣ 5 1/2 ವರ್ಷಗಳ ಕಾಲಾವಧಿಗೆ ರೂ 98 ಕೋಟಿಗಳ ಅಂದಾಜು ವೆಚ್ಚವನ್ನು ಒಳಗೊಂಡಂತೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ ಸದರಿ ಯೋಜನೆಯ ಸಂಪೂರ್ಣ ವೆಚ್ಚವನ್ನು ತಾತ್ಕಾಲಿಕ ಪಡಿತರ ಕೂಪನ್, ಪಡಿತರ ಚೀಟಿ ಮತ್ತು ಆಹಾರ ಕೂಪನ್‌ಗಳು ಹಾಗೂ ಇತರೇ ಸೇವೆಗಳಿಗೆ ನಿಗಧಿಪಡಿಸಿರುವ ಶುಲ್ಕದಿಂದ ಭರಿಸಲಾಗುತ್ತಿದೆ ಈ ಯೋಜನೆಗೆ ಸರ್ಕಾರದ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ

109 (427) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳೆಷ್ಟು,

ಆ) ದೇವಸ್ಥಾನದ ನೌಕರಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದವರಿಗೆ ಮೀಸಲಾತಿ ನೀಡಿದೆಯೇ (ದರ್ಜೆವಾರು ವಿವರವನ್ನು ನೀಡುವುದು) ,

ಇ) ಮೀಸಲಾತಿ ನೀಡುವಲ್ಲಿ ಅನ್ಯಾಯವಾಗಿದೆಯೆಂಬುದು ತಿಳಿದಿದ್ದರೂ ಮರುನೇಮಕಾತಿ ಸಂದರ್ಭದಲ್ಲೂ ಇಂತಹ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ವರ್ಗವಾರು ಮೀಸಲಾತಿ ನೀಡುವ ಸಂದರ್ಭದಲ್ಲಿ ಅನುಸರಿಸುತ್ತಿರುವ ಮಾನದಂಡವೇನು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳ ಸಂಖ್ಯೆ 34,194

ಆ) ಮುಜರಾಯಿ ದೇವಸ್ಥಾನಗಳ ನೌಕರರನ್ನು ಪ್ರಮುಖವಾಗಿ 2 ರೀತಿ ವರ್ಗೀಕರಿಸಲಾಗಿರುತ್ತದೆ

1 **ಒಳಾಂಗಣ ನೌಕರರು (ಆಗಮೀಕರು, ಅರ್ಚಕರು, ಉಪಾದಿವಂತರು, ಪರಿಚಾರಕರು)** – ಅರ್ಚಕ, ಆಗಮಿಕ, ಪರಿಚಾರಕ, ಉಪಾದಿವಂತ, ಪಾಚಕ, ಸ್ಥಾನಿಕ, ಜೋಯಿಸ, ಶ್ರೀಪಾದ, ಶ್ರೀಗಂಧ, ಕಟ್ಟಿಗೆ